**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ:ಪಪೂಶಿಇ/ಪರೀಕ್ಷೆ/ನೋಂದಣಿ&ಫಲಿತಾಂಶ/2015-16 ದಿನಾಂಕ: 07-06-2016

**ಸುತ್ತೋಲೆ**

ವಿಷಯ: 2016ರ ಜುಲೈ ತಿಂಗಳಲ್ಲಿ ನಡೆಯುವ ದ್ವಿತೀಯ ಪಿ.ಯು.ಸಿ. ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡುವ ಬಗ್ಗೆ

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ:25-05-2016

* * * *

2016ರ ಜುಲೈ ತಿಂಗಳಲ್ಲಿ ನಡೆಯುವ ದ್ವಿತೀಯ ಪಿ.ಯು.ಸಿ. ಪೂರಕ ಪರೀಕ್ಷೆಗೆ ಹಾಜರಾಗುವ ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಮತ್ತು ಫಲಿತಾಂಶ ತಿರಸ್ಕರಿಸಿ ಪುನ: ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಉಲ್ಲೇಖಿತ ಸುತ್ತೋಲೆಯಲ್ಲಿ ದಿನಾಂಕ:06-06-2016ರವರೆಗೆ ನಿಗದಿಪಡಿಸಲಾಗಿತ್ತು. ಕೆಲವು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಲು ಕಾಲಾವಕಾಶ ನೀಡಬೇಕೆಂದು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ **ಅನುತ್ತೀರ್ಣ ಮತ್ತು ಫಲಿತಾಂಶ ತಿರಸ್ಕರಣೆ ಮಾಡುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ದಂಡ ಶುಲ್ಕವಿಲ್ಲದೆ ದಿನಾಂಕ: 11-06-2016ರವರೆಗೆ ವಿಸ್ತರಿಸಲಾಗಿದೆ.** ಈ ವಿಷಯವನ್ನು ಪರೀಕ್ಷಾ ಶುಲ್ಕ ಸಂದಾಯ ಮಾಡದ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರು **SMS** ಮೂಲಕ ಮಾಹಿತಿ ನೀಡುವುದು.

ದಿನಾಂಕ: 06-06-2016ರವರೆಗೆ ಪರೀಕ್ಷಾ ಶುಲ್ಕ ಸಂದಾಯ ಮಾಡಿರುವ ಪರೀಕ್ಷಾ ಅರ್ಜಿಗಳನ್ನು ಕಾಲೇಜುವಾರು ಕ್ರೋಢಿಕರಿಸಿ ದಿನಾಂಕ: 09-06-2016ರಂದು ಆಯಾ ಜಿಲ್ಲಾ ಉಪ ನಿರ್ದೇಶಕರು ಒಬ್ಬ ಪ್ರತಿನಿಧಿಯ ಮೂಲಕ ಖುದ್ದಾಗಿ ಕೇಂದ್ರ ಕಛೇರಿಗೆ ತಲುಪಿಸುವುದು. ವಿಸ್ತರಿಸಿರುವ ದಿನಾಂಕದವರೆಗೆ ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಿದ ಆಯಾ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳ ಅರ್ಜಿಗಳನ್ನು ದಿನಾಂಕ:14-06-2016 ರಂದು ಕೇಂದ್ರ ಕಛೇರಿಗೆ ಖುದ್ದಾಗಿ ತಲುಪಿಸಲು ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳಿಗೆ
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪಾಚಾರ್ಯರಿಗೆ
3. ಹೆಚ್ಚುವರಿ/ಕಛೇರಿ ಪ್ರತಿ
4. 'ಇ' ಆಡಳಿತ ಶಾಖೆಯ ಸಹಾಯಕ ನಿರ್ದೇಶಕರು